೧೯೮೪ನೇ ಇಸವಿಯ ಸೆಪ್ಟೆಂಬರ್ ೨ನೇ ದಿನಾಂಕದಂದು ಆಂಧ್ರಪ್ರದೇಶ, ಕೇರಳ, ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು, ಗುಜರಾತ್, ಪಾಂಡಿಚೇರಿ, ಗೋವಾ, ಡಯ್ಯು ಡಾಮನ್ ಹಾಗೂ ದಾದ್ರಾ ಮತ್ತು ನಗರ್‌ಹವೇಲಿ ರಾಜ್ಯಗಳ ನಡುವೆ ಆಗಿದ್ದ ಒಪ್ಪಂದದ ೭ನೇ ಖಂಡದ ೨ನೇ ಉಪ ಖಂಡವನ್ನು ತಿದ್ದುಪಡಿ ಮಾಡಿರುವ ಬಗ್ಗೆ ದಿನಾಂಕ ೧೫ನೇ ಜೂನ್ ೧೯೮೮ ರಂದು ಹೊರಡಿಸಲಾದ ಎಫ್‌ಟಿಡಿ ೨೭೬ ಡಿಎಂಎ ೮೬ನೇ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

೧೨-೩೦ ಪಿ. ಎಂ.

ವರದಿಯನ್ನೊಪ್ಪಿಸುವುದು

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಅಧ್ಯಕ್ಷರು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ).—ನನ್ನ ಹೆಸರಿನ ಮುಂದಿರತಕ್ಕಂತಹ ಈ ಕೆಳಗಿನ ೪ ವರದಿಗಳನ್ನು ಸಭೆಯ ಮುಂದಿಡುತ್ತೇನೆ.

೮) ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ೮೪-೮೫ನೇ ಸಾಲಿನ ಹಣ ವಿನಿಯೋಗ ಮತ್ತು ವಿತ್ತೀಯ ಲೆಕ್ಕ ಪತ್ರಗಳ ಮೇಲಿನ ಹಾಗೂ ಸದರಿ ಸಾಲುಗಳ ಬಗ್ಗೆ ಭಾರತದ ನಿಯಂತ್ರಕ ಹಾಗೂ ಮಹಾ ಲೇಖಾ ಪರೀಕ್ಷಕರ ಸಿವಿಲ್ ವರದಿಗಳ ಬಗ್ಗೆ ಸಮಿತಿಯ ೩೯ನೇ ವರದಿ;

೯) ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ ಸಮಿತಿಯ ಮೂರನೆಯ ಹಾಗೂ ಐದನೆಯ ವರದಿಗಳಲ್ಲಿ ಮಾಡಿದ್ದ (ಆರನೆ ವಿಧಾನ ಸಭೆ) ಶಿಫಾರಸ್ಸುಗಳಮೇಲೆ ಸರಕಾರದವರು ತೆಗೆದುಕೊಂಡಿರುವ ಕ್ರಮದ ಬಗ್ಗೆ ೪೦ನೇ ವರದಿ;

೧೦) ಸರಕಾರಿ ಇಲಾಖೆಗಳಲ್ಲಿ ಗಣಕೀಕರಣದ ಬಗ್ಗೆ ೪೧ನೇ ವರದಿ;

೧೧) ಪಶುಸಂಗೋಪನೆ, ಮೀನುಗಾರಿಕೆ ಅರಣ್ಯ ಇಲಾಖೆಗೆ ಸಂಬಂಧಿಸಿದಂತೆ ೮೪-೮೫ನೇ ಸಾಲಿನ ಹಣ ವಿನಿಯೋಗ ಮತ್ತು ವಿತ್ತೀಯ ಲೆಕ್ಕಪತ್ರಗಳ ಮೇಲಿನ ಹಾಗೂ ಸದರಿ ಸಾಲುಗಳ ಬಗ್ಗೆ ಭಾರತದ ನಿಯಂತ್ರಕ ಹಾಗೂ ಮಹಾ ಲೇಖಾ ಪರೀಕ್ಷಕರ (ಸಿವಿಲ್ ಹಾಗೂ ಕಂದಾಯ) ವರದಿಗಳ ಬಗ್ಗೆ ೪೨ನೇ ವರದಿ.

ಅಧ್ಯಕ್ಷರು.—ವರದಿಗಳನ್ನು ಒಪ್ಪಿಸಲಾಯಿತು.

ಪ್ರಕಟಣೆ-೧

ಅಧ್ಯಕ್ಷರು.—ದಿನಾಂಕ ೧-೧೦-೮೮ ರಂದು ಮಾನ್ಯ ಮುಖ್ಯಮಂತ್ರಿಗಳು ನನಗೆ ಪತ್ರವೊಂದನ್ನು ಬರೆದು ಅವರಿಗೆ ಸಭ್ಯಕ್ಕೆ ಹೆಚ್ಚಿನ ಇಲಾಖೆಗಳ ಹೊಣೆಗಾರಿಕೆ ಇರುವುದರ ಪ್ರಯುಕ್ತ ಅಧಿವೇಶನದ ಎರಡೂ ಸದನಗಳಲ್ಲಿ ಆಯಾ ಇಲಾಖೆಗಳಿಗೆ ಸಂಬಂಧಿಸಿದ ಕಾರ್ಯಕಲಾಪಗಳನ್ನು ಏಕಕಾಲಕ್ಕೆ ನೋಡಿಕೊಳ್ಳುವುದು ಕಷ್ಟಕರವಾದ್ದರಿಂದ ಕೆಲವು ಇಲಾಖೆಗಳಿಗೆ ಸಂಬಂಧಿಸಿದಂತೆ ವಿಧಾನ ಸಭೆಯ ಪ್ರಶ್ನೋತ್ತರ ಕಾರ್ಯಕಲಾಪಗಳು ಹಾಗೂ ಇತರೇ ಕಾರ್ಯಕಲಾಪಗಳನ್ನು ಅವರ ಸಹೋದ್ಯೋಗಿ ಸಚಿವರುಗಳು ನೋಡಿಕೊಳ್ಳುವರೆಂದು ಪತ್ರದಲ್ಲಿ ತಿಳಿಸಿದ್ದಾರೆ,

ಅವರು ಸೂಚಿಸಿರುವ ವ್ಯವಸ್ಥೆಯು ಕೆಳಕಂಡಂತಿವೆ.

ಸಚಿವರ ಹೆಸರು	ಇಲಾಖೆ
೧. ಶ್ರೀ ಬಿ. ರಾಚಯ್ಯ	ತೋಟಗಾರಿಕೆ
೨. ಶ್ರೀ ಎಂ. ಪಿ. ಪ್ರಕಾಶ್	ಸಹಕಾರ
೩. ಶ್ರೀ ಪಿ. ಜಿ. ಆರ್. ಸಿಂಧ್ಯ	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
೪. ಶ್ರೀ ಹೆಚ್. ಡಿ. ದೇವೇಗೌಡ	ಬಂದರು ಮತ್ತು ಒಳನಾಡು ಸಾರಿಗೆ
೫. ಪ್ರೊ॥ ಎ. ಲಕ್ಷ್ಮಿ ಸಾಗರ್	ಕಂದಾಯ ಇಲಾಖೆ (ಪಕ್ಷ ಹೊರತುಪಡಿಸಿ)
೬. ಶ್ರೀ ಜೆ. ಹೆಚ್. ಪಟೇಲ್	ಕಾರ್ಮಿಕ
೭. ಶ್ರೀ ಕೃಷ್ಣ	ಮೀನುಗಾರಿಕೆ